O.S 2/2023

P.W.4

ಸಾಕ್ಷಿಯನ್ನು ದಿಃ 06-04-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ  1 ಮತ್ತು 2 ನೇ ಪ್ರತಿವಾದಿ ಪರ ಶ್ರೀ.ವಿ.ಎಸ್.ಪಿ.ಪಿ ವಕೀಲರಿಂದ

ನಾನು ತಾರಿಕೊಪ್ಪದ ನಿವಾಸಿಯಾಗಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಯರ ಪರಿಚಯ ಇರುವುದಿಲ್ಲ. ಪ್ರತಿವಾದಿ 1 ಮತ್ತು 2 ರವರ ಜಮೀನು ನಮ್ಮ ಜಮೀನಿಗೆ ಹೊಂದಿಕೊಂಡಿರುತ್ತದೆ ಎಂದರೆ ಸರಿ. ಅವರು ಸದರಿ ಜಮೀನಿನಲ್ಲಿ ಎಷ್ಟು ದಿನದಿಂದ ಸಾಗುವಳಿ ಮಾಡುತ್ತಿದ್ದರು ಎಂದು ನನಗೆ ಮಾಹಿತಿ ಇಲ್ಲ. ಪ್ರತಿವಾದಿ ನಂ.1 ಮತ್ತು 2 ರವರ ದಕ್ಷಿಣ ದಿಕ್ಕಿಗೆ ನನ್ನ ಜಮೀನು ಇರುತ್ತದೆ. 1 ನೇ ಪ್ರತಿವಾದಿಯ ತಂದೆಯನ್ನು ನಾನು ನೋಡಿರುವುದಿಲ್ಲ. ವಾದಿಗಳು ಸುಮಾರು 10 ವರ್ಷಗಳಿಂದ ಪರಿಚಯ ಇರುತ್ತಾರೆ. 2 ನೇ ವಾದಿಯ ಜಮೀನು ನನ್ನ ಹೊಲದ ಪೂರ್ವ ದಿಕ್ಕಿಗೆ ಇರುತ್ತದೆ. ಸದರಿ ಜಮೀನು ಸುಮಾರು 6 ರಿಂದ 7 ಎಕರೆ ಇರಬಹುದು. 1 ಮತ್ತು 2 ನೇ ಪ್ರತಿವಾದಿಯ ಜಮೀನಿನ ವಿಸ್ತೀರ್ಣ ಸುಮಾರು 10 ರಿಂದ 12 ಎಕರೆ ಇರಬಹುದು. 1 ನೇ ಮತ್ತು 2 ನೇ ಪ್ರತಿವಾದಿಯ ಸಾಗುವಳಿ ಮಾಡುತ್ತಿರುವ ಜಮೀನು ಮುರಿಗೆಪ್ಪ ಡಬಾಳಿ ಅವರದು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರಿಗೆ ಜಮೀನು Tenancy ಖಾಯ್ದೆಯಡಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯ ಜಮೀನಿನ ಚಕಬಂದಿ ಹೇಳಲು ನನಗೆ ಬರುವುದಿಲ್ಲ. ವಾದಿಯರಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ  3 ಮತ್ತು 4 ನೇ ಪ್ರತಿವಾದಿ ಪರ ಶ್ರೀಪಿ.ಎಮ್.ಎನ್ ವಕೀಲರಿಂದ

3 ಮತ್ತು 4 ನೇ ಪ್ರತಿವಾದಿಯರು ಮತ್ತು ವಾದಿಯರು ಸೇರಿಕೊಂಡು ಸಾಗುವಳಿ ಮಾಡುತ್ತಾರೆ ಎಂದರೆ ಸರಿ.ಆದ್ದರಿಂದ ಅವರಿಗೂ ಜಮೀನಿನಲ್ಲಿ ಸಮನಾದ ಹಕ್ಕಿದೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

Sd/-06-04-2026
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ

ಸಾಕ್ಷಿದಾರರ ಸಹಿಃ